# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಃ ಬೇಲೂರು

## ಃಸಿ.ಸಿ. ಸಂಖ್ಯೆ 156/2019

| | |
|---|---|
| ಪಿರ್ಯಾದಿ | ಃ ಕರ್ನಾಟಕ ಸರ್ಕಾರವನ್ನು ಪ್ರತಿನಿಧಿಸಿ<br>ಬೇಲೂರು ಪೋಲಿಸ್ |
| | ವಿರುದ್ಧ |
| ಆರೋಪಿತರು | ಃ ಲೋಕೇಶ ಮತ್ತು ಮತ್ತೊಬ್ಬರು |

## ಃ ಆರೋಪಣೆಃ

1. ಶ್ರೀ ಲೋಕೇಶ ಃಬಿನ್ಃ ನಿಂಗನಾಯ್ಕ, **40** ವರ್ಷ, ವೀರದೇವನಹಳ್ಳಿ ಗ್ರಾಮ, ಹಳೇಬೀಡು ಹೋಬಳಿ, ಬೇಲೂರು ತಾಲ್ಲೂಕು.
2. ಸತೀಶ ಹೆಚ್.ಜಿ. ಃ ಬಿನ್ಃ ಗಣೇಶ, **38** ವರ್ಷ, ಕುವೆಂಪುನಗರ, ಕೆ.ಆರ್.ಪುರ ಪೋಲಿಪೀಸ್ ಠಾಣೆ ಹತ್ತಿರ, ಹಾಸನ ಟೌನ್, ಹಾಲಿಃ ಜನಪ್ರಿಯಾ ಟ್ರಾಕ್ಟರ್ ಶೋ ರೂಂ, ನೆಹರೂ ನಗರ, ಬೇಲೂರು ಟೌನ್

ಈ ಕೇಸಿನಲ್ಲಿ ಆರೋಪಿಯಾಗಿರುವ ನಿಮ್ಮ ಮೇಲೆ

ಶ್ರೀ ಪ್ರಕಾಶ್ ನಾಯಕ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಬೇಲೂರು ಆದ ನಾನು ಈ ಕೆಳಕಂಡ ಆರೋಪವನು ಇಡುತ್ತಿದ್ದೇನೆ.

ದಿನಾಂಕಃ 16.01.2019 ರಂದು ಸಂಜೆ 5–00 ಗಂಟೆ ಸಮಯದಲಪ್ಲಿ ಕಿರೇಹಳ್ಳಿ ಗ್ರಾಮದ ಸರ್ವೆ ನಂ–80 ರ ಜಮೀನಿನಲ್ಲಿರುವ ಚಾಸಾ–1 ರವರ ಮನೆಯ ಮುಂಭಾಗ ಪಾರ್ವತಮ್ಮ ರವರು ಬಟ್ಟೆಯನ್ನು ಒಣಹಾಕಲು ಮನೆಯಿಂದ ಹೊರಗಡೆ ಬಂದಾಗ 1 ನೇ ಆರೋಪಿಯಾದ ನೀನು ಇಂಜಿನ್ ನಂಃ39.1357/SZM13393 ಚಾರ್ಸಿ ನಂ- MBNAP48AAJTM48256 ರ ಹೊಸ ಟ್ರಾಕ್ಟರ್ ನ ಇಂಜಿನ್ ಅನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಹಿಂದಕ್ಕೆ ಚಾಲನೆ ಮಾಡಿ ಪಾರ್ವತಮ್ಮ ರವರಿಗೆ ಡಿಕ್ಕಿಪಡಿಸಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ. 279 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

2. ಮೇಲ್ಕಂಡ ದಿನ, ಸಮಯ ಮತ್ತು ಸ್ಥಳದಲ್ಲಿ 1ನೇ ಆರೋಪಿಯಾದ ನೀನು ಇಂಜಿನ್ ನಂ:39.1357/SZM13393 ಚಾರ್ಸಿ ನಂ-MBNAP48AAJTM48256 ರ ಹೊಸ ಟ್ರಾಕ್ಟರ್ ನ ಇಂಜಿನ್ ಅನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಹಿಂದಕ್ಕೆ ಚಾಲನೆ ಮಾಡಿ ಪಾರ್ವತಮ್ಮ ರವರಿಗೆ ಡಿಕ್ಕಿಪಡಿಸಿದ ಪರಿಣಾಮ ಪಾರ್ವತಮ್ಮ ರವರ ಎಡಪಕ್ಕೆಗೆ, ಹೊಟ್ಟೆಯ ಹತ್ತಿರ ತೀವ್ರತರವಾದ ಗಾಯಗಳಾಗಿ ಸ್ಥಳದಲ್ಲೇ ಮೃತಪಟ್ಟಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ. 304(ಎ) ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

3. ಮೇಲ್ಕಂಡ ದಿನ, ಸಮಯ ಮತ್ತು ಸ್ಥಳದಲ್ಲಿ 2ನೇ ಆರೋಪಿಯಾದ ನೀನು 1ನೇ ಆರೋಪಿಯವರ ಹೆಸರಿಗೆ ಹೊಸ ಟ್ರಾಕ್ಟರ್ ಅನ್ನು ನೋಂದಣಿ ಮಾಡಿಸದೇ ಹಾಗೂ ವಿಮೆ ಮಾಡಿಸದೇ ಟ್ರಾಕ್ಟರ್ ಅನ್ನು ತನ್ನ ಶೋರೂಂನಿಂದ ಚಾಲನಾ ಪರವಾನಿಗೆ ಇಲ್ಲದ 1ನೇ ಆರೋಪಿಯ ವಶಕ್ಕೆ ನೀಡಿ ಮೋಟಾರು ವಾಹನ ಕಾಯ್ದೆ ಕಲಂ 50ನ್ನು ಉಲ್ಲಂಘಿಸಿ ಕಲಂ. *177* ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತಾರೆ.

*4.* ಮೇಲ್ಕಂಡ ದಿನ, ಸಮಯ ಮತ್ತು ಸ್ಥಳದಲ್ಲಿ *1*ನೇ ಆರೋಪಿಯಾದ ನೀನು ಇಂಜಿನ್ ನಂ:*39.1357/SZM13393* ಚಾರ್ಸಿ ನಂ-*MBNAP48AAJTM48256* ರ ಹೊಸ ಟ್ರಾಕ್ಟರ್ ಗೆ ಅಧಿಕೃತ ಚಾಲನಾ ಪರವಾನಗಿ ಇಲ್ಲದೇ ಓಡಿಸಿದ್ದು, ಕಾರಣ ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ *3* ಸಹವಾಚಕ *181* ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತಾರೆ.

*5.* ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ *1*ನೇ ಆರೋಪಿಯಾದ ನೀನು ಇಂಜಿನ್ ನಂ:*39.1357/SZM13393* ಚಾರ್ಸಿ ನಂ-*MBNAP48AAJTM48256* ರ

ಹೊಸ ಟ್ರಾಕ್ಟರ್ ಗೆ ವಿಮೆ ಮಾಡಿಸದೇ ಸದರಿ ವಾಹನವನ್ನು ಚಾಲನೆ ಮಾಡಿ ಅಪಘಾತಪಡಿಸಿದ್ದು, ಮೋಟಾರು ವಾಹನ ಕಾಯ್ದೆ ಕಲಂ *146* ಸಹವಾಚಕ *196* ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತಾರೆ.

6. ಮೇಲ್ಕಂಡ ದಿನ, ಸಮಯ ಮತ್ತು ಸ್ಥಳದಲ್ಲಿ 2 ನೇ ಆರೋಪಿಯಾದ ನೀವು ತಮ್ಮ ಶೋರೂಂನಿಂದ 1 ನೇ ಆರೋಪಿಗೆ ಅಧಿಕೃತವಾದ ಚಾಲನಾ ಪರವಾನಿಗೆ ಇಲ್ಲದೇ ಇದ್ದರೂ ಸಹ ಹೊಸ ಟ್ರಾಕ್ಟರ್ ಅನ್ನು ನೀಡಿದ್ದು, ಕಾರಣ ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ *5* ಸಹವಾಚಕ *180* ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತಾರೆ.

(ಮೇಲ್ಕಂಡ ಆರೋಪಣೆಯ ಮೇಲೆ ನಿಮ್ಮನ್ನು ಈ ನ್ಯಾಯಾಲಯದ ವಿಚಾರಣೆಗೆ ಗುರಿಪಡಿಸಿರುತ್ತೇನೆ ಎಂದು ಈ ಮೂಲಕ ನಿರ್ದೇಶಿಸುತ್ತೇನೆ)

ಸ್ಥಳ ಃ ಬೇಲೂರು
ದಿನಾಂಕಃ 27–02–2023

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು.